# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 165 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸಬೇಕಾದ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 10 ನೇತರಗತಿ ಫಲಿತಾಂಶಕ್ಕೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯು ಕೊನೆಯ ಸ್ಥಾನದಲ್ಲಿರುವುದಕ್ಕೆ ಸರ್ಕಾರದಿಂದ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ಶಾಲಾವಾರು ನೀಡುವುದು ); | ಪ್ರತಿ ವಿದ್ಯಾರ್ಥಿಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಸಮಾನ ಅವಕಾಶ ಕಲ್ಪಿಸಿ, ಪರೀಕ್ಷೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕಾಪಾಡಿಕೊಳ್ಳಲು, ರಾಜ್ಯದ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಹಾಗೂ ರಾಜ್ಯದ ಸರ್ವಾಂಗೀಣ ಪ್ರಗತಿಯ ದೃಷ್ಟಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಅತಿಸೂಕ್ಷ್ಮ ಬುನಾದಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪಲಿತಾಂಶ ಸುಧಾರಣೆಗಾಗಿ ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿರುತ್ತದೆ:-<br>1. 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವೃದ್ಧಿಗಾಗಿ ಸರ್ಕಾರದಿಂದ ದಿನಾಂಕ:01.07.2025 ರಂದು 29 ಕಾರ್ಯಕ್ರಮಗಳ /ಅಂಶಗಳ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.<br>2. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣತಾ ಮಟ್ಟವನ್ನು ಹೆಚ್ಚಿಸಲು ವಿಷಯವಾರು ಸಂಪನ್ಮೂಲ ವ್ಯಕ್ತಿಗಳನ್ನು ಒಂದು ದಿನಕ್ಕೆ 2-3 ಜಿಲ್ಲೆಗಳಂತೆ ವಿಭಾಗವಾರು ಒಂದು ಕಡೆ ಸೇರಿಸಿ, ವಿವಿಧ ದಿನಾಂಕಗಳಂದು ತರಬೇತಿಯನ್ನು ನೀಡಲಾಗಿರುತ್ತದೆ. ಸದರಿ ಸಂಪನ್ಮೂಲ ವ್ಯಕ್ತಿಗಳಿಂದ ತಾಲ್ಲೂಕುವಾರು ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>3. 14 ನವೆಂಬರ್ 2025ರಂದು ರಾಜ್ಯಾದ್ಯಂತ ಮಹಾ ಪೋಷಕರ ಸಭೆಯನ್ನು ಎಲ್ಲಾ ಶಾಲೆಗಳಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮ ಪಡಿಸುವ ಬಗ್ಗೆ ಪೋಷಕರ ಜವಾಬ್ದಾರಿಯನ್ನು ಮನವರಿಕೆ ಮಾಡಲಾಯಿತು. ಸದರಿ ಸಭೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ ಮಾಡಿರುವ ವಿದ್ಯಾರ್ಥಿ ಅಂಕಣದ ಬಗ್ಗೆ ಪರಿಚಯ ನೀಡಲಾಯಿತು.<br>4. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಾಲತಾಣದ ಮುಖಪುಟದಲ್ಲಿ ವಿದ್ಯಾರ್ಥಿ ಅಂಕಣ (Student Corner) ವಿನ್ಯಾಸಗೊಳಿಸಿ, ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಅನುಕೂಲವಾಗುವ ಪರೀಕ್ಷಾ ಅಧ್ಯಯನ ವಿಷಯಗಳನ್ನು ಇಂಡೀಕರಿಸಲಾಗಿದೆ. ಪರೀಕ್ಷೆ-1, 2, 3 ರ ವೇಳಾಪಟ್ಟಿಯನ್ನು ಮೊದಲೇ ಪೂರೈಸಲಾಗಿದೆ. ಹಾಗೆಯೇ ಮೂರು ಪೂರ್ವ ಸಿದ್ಧತಾ ಪರೀಕ್ಷೆಯ ವೇಳಾಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ. |
| ಆ) | ಕಲಬುರಗಿ ಜಿಲ್ಲೆಯಲ್ಲಿ 10 ನೇ ತರಗತಿ ಫಲಿತಾಂಶ ಕುರಿತು ಶಿಕ್ಷಕರ ಬದಲಾವಣೆ ಮಾಡಲಾಗಿದೆಯೇ ಅಥವಾ ಅವರಿಗೆ ಫಲಿತಾಂಶದ ವಿಷಯದಲ್ಲಿ ಶಿಕ್ಷಕರಿಗೆ ಯಾವ ಮಾರ್ಗ ಸೂಚಿ ನೀಡಲಾಗಿದೆ; | |

5. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣದ ಮುಖಪುಟದಲ್ಲಿ ವಿದ್ಯಾರ್ಥಿ ಅಂಕಣ (Student Corner) ವಿನ್ಯಾಸಗೊಳಿಸಿ, ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಅನುಕೂಲವಾಗುವ ಪರೀಕ್ಷಾ ಅಧ್ಯಯನ ವಿಷಯಗಳನ್ನು ಇಂಡೀಕರಿಸಲಾಗಿದೆ.

6. ಈಗಾಗಲೇ ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಅನುಕೂಲವಾಗುವಂತೆ ವಿಷಯವಾರು ನೀಲ ನಕ್ಷೆ(Blue Print) ರಚಿಸಿ, ಅದರನ್ವಯ ಮಾದರಿ ಪ್ರಶ್ನೆಪತ್ರಿಕೆಗಳನ್ನು (Model Question Papers) ತಯಾರಿಸಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಸದರಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಸಿಸಿ, ಫಲಿತಾಂಶ ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಿದೆ.

7. ಎಲ್ಲಾ ವಿಷಯಗಳ ಸಮಗ್ರ ಪ್ರಶ್ನೆ ಕೋಠಿಗಳನ್ನು (Exhaustive Question Bank) ಸಂಬಂಧಪಟ್ಟ ವಿಷಯ ತಜ್ಞರಿಂದ ರಚಿಸಲಾಗಿದೆ. ಪ್ರಶ್ನೆ ಕೋಠಿಯಲ್ಲಿ ಅಧ್ಯಾಯವಾರು ವಿವಿಧ ಅಂಕಗಳ ಪ್ರಶ್ನೆಗಳನ್ನು ಸುಲಭ/ಸಾಧಾರಣ/ಕಠಿಣ ಎಂದು ವರ್ಗೀಕರಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

8. ನೀಲ ನಕ್ಷೆ, ಮಾದರಿ ಪ್ರಶ್ನೆ ಪತ್ರಿಕೆಗಳು ಹಾಗೂ ಪ್ರಶ್ನೆ ಕೋಠಿಗಳನ್ನು ಬಳಸಿಕೊಂಡು ಮುಂಬರುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಕುರಿತಂತೆ ಶಿಕ್ಷಕರಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಹಾಗೂ DSERT ಸಹಯೋಗದೊಂದಿಗೆ ಜಿಲ್ಲಾವಾರು, ವಿಷಯವಾರು ಪುನಶ್ಚೇತನ ತರಬೇತಿ ಶಿಬಿರಗಳನ್ನು ನಡೆಸಲಾಗಿದೆ.

9. ಫಲಿತಾಂಶ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತಂತೆ ರಾಜ್ಯದ ಎಲ್ಲಾ ಶಿಕ್ಷಕರಿಗೆ ಸಂಪನ್ಮೂಲವ್ಯಕ್ತಿಗಳಿಂದ ONLINE ಕಾರ್ಯಾಗಾರವನ್ನು ನಡೆಸಲಾಗಿದೆ ಹಾಗೂ ಸದರಿ ವಿಡಿಯೋಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ವೀಕ್ಷಣೆಗಾಗಿ YOUTUBE ನಲ್ಲಿ ಲಭ್ಯಗೊಳಿಸಲಾಗಿದೆ.

10. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಮೂರು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಜನವರಿ-2026ರ ಮಾಹೆಯಿಂದ ನಡೆಸಲು ಉದ್ದೇಶಿಸಲಾಗಿದೆ.

11. ಜನವರಿ-2026 ರ ಅಂತ್ಯದೊಳಗೆ ಪಠ್ಯಕ್ರಮ ಬೋಧನೆಯನ್ನು ಪೂರ್ಣಗೊಳಿಸಿ, ಫೆಬ್ರುವರಿ-2026 ರಿಂದ ಪುನರಾವರ್ತನೆ ಹಾಗೂ ಪೂರ್ವಸಿದ್ಧತಾ ಪರೀಕ್ಷೆಗಳಿಗೆ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

12. ಫಲಿತಾಂಶ ಸುಧಾರಣಾ ಕ್ರಮಗಳ ಅನುಷ್ಠಾನ ಕುರಿತಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ, ನಿರಂತರ ಅನುಪಾಲನೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

13. ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಕನಿಷ್ಠ ಉತ್ತೀರ್ಣತಾ ಪ್ರಮಾಣವನ್ನು ಶೇ.35 ರಿಂದ ಶೇ.33 ಕ್ಕೆಮಾರ್ಪಡಿಸಿ, 2025-26ನೇ ಸಾಲಿನ ಹಾಗೂ ಮುಂಬರುವ ಪರೀಕ್ಷೆಗಳಿಗೆ ಅನ್ವಯವಾಗುವಂತೆ ಘೋಷಿಸಲಾಗಿದೆ. ಇದರಿಂದ ಉತ್ತೀರ್ಣತಾ ಪ್ರಮಾಣ ಹೆಚ್ಚಳವಾಗಿ ಉನ್ನತ ಶಿಕ್ಷಣ

<table>
<tr><td></td><td></td><td>ಪಡೆಯುವ ವಿದ್ಯಾರ್ಥಿಗಳ ಪ್ರಮಾಣ ಅಧಿಕವಾಗುತ್ತದೆ. ವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಸಾಮಾಜಿಕ ಮುಖ್ಯವಾಹಿನಿಯಲ್ಲಿ ಮುಂದುವರೆಯಲು ಸಹ ಇದು ಸಹಕಾರಿಯಾಗಲಿದೆ<br><br>ಮುಂದುವರೆದು, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>• ಸಮವಸ್ತ್ರ.<br>• ಶೂ-ಸಾಕ್ಸ.<br>• ಪಠ್ಯ ಪುಸ್ತಕ.<br>• ಮಧ್ಯಾಹ್ನ ಉಪಹಾರ, ಪೂರಕ ಪೌಷ್ಟಿಕಾಂಶಯುಕ್ತ ಆಹಾರಗಳಾದ ಮೊಟ್ಟೆ /ಬಾಳೆಹಣ್ಣು ಮತ್ತು ಹಾಲು.</td></tr>
<tr><td>ಇ)</td><td>ಜಿಲ್ಲೆಯ ಮಕ್ಕಳಿಗೆ ಹೆಚ್ಚುವರಿ ತರಗತಿಯನ್ನು ತೆಗೆದುಕೊಳ್ಳಲು ಸರ್ಕಾರ ಚಿಂತಿಸಿದೆಯೇ;</td><td>ಈಗಾಗಲೇ ಶಾಲಾ ಸಮಯದ ಮುಂಚಿತವಾಗಿ ಹಾಗೂ ಶಾಲೆಯ ಅವಧಿಯ ನಂತರ ಹೆಚ್ಚುವರಿ ತರಗತಿಯನ್ನು ನಡೆಸಲಾಗುತ್ತಿದೆ.</td></tr>
<tr><td>ಈ)</td><td>ರಾಜ್ಯದಲ್ಲಿ ಎಷ್ಟು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ; ಮುಂದಿನ ದಿನಗಳಲ್ಲಿ ಶಾಲೆಗೆ ಮಕ್ಕಳು ಹೆಚ್ಚು ಬರುವ ನಿರೀಕ್ಷೆಯಿಂದ ಬಸ್ ವ್ಯವಸ್ಥೆ ಮಾಡಲು ಸರ್ಕಾರ ಚಿಂತಿಸಿದೆಯೇ;</td><td>ಸಮಗ್ರ ಶಿಕ್ಷಣ ಕರ್ನಾಟಕದಿಂದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಒದಗಿಸುವ ಯೋಜನೆ ಇರುವುದಿಲ್ಲ. ಆದರೆ, ಕೇಂದ್ರ ಶಿಕ್ಷಣ ಮಂತ್ರಾಲಯದ ಕಾರ್ಯಕ್ರಮದಡಿ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಸಾರಿಗೆ ಭತ್ಯೆಯನ್ನು ಘಟಕ ವೆಚ್ಚ ಪ್ರತಿ ಮಾಸಿಕ ರೂ.600/- ರಂತೆ 10 ತಿಂಗಳಿಗೆ 1 ರಿಂದ 10 ನೇ ತರಗತಿ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ.<br><br>2025-26 ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಗಳ 27124 ವಿದ್ಯಾರ್ಥಿಗಳಿಗೆ ಹಾಗೂ ಪ್ರೌಢಶಾಲೆಗಳ 2762 ವಿದ್ಯಾರ್ಥಿಗಳಿಗೆ ಅನುದಾನ ಸಾರಿಗೆ ಭತ್ಯೆ ಅನುಮೋದನೆಯಾಗಿರುತ್ತದೆ.<br><br>ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಸಾರಿಗೆ ಭತ್ಯೆ ವಿವರ ಈ ಕೆಳಕಂಡಿಂತಿದೆ:
<table>
<tr><th>ವರ್ಷ</th><th>ಮಕ್ಕಳ ಸಂಖ್ಯೆ ಪ್ರಾಥಮಿಕ</th><th>ಮಕ್ಕಳ ಸಂಖ್ಯೆ ಪ್ರೌಢ</th><th>ಒಟ್ಟು</th></tr>
<tr><td>2022-23</td><td>17967</td><td>2110</td><td>20077</td></tr>
<tr><td>2023-24</td><td>18782</td><td>2108</td><td>20890</td></tr>
<tr><td>2024-25</td><td>21523</td><td>2024</td><td>23570</td></tr>
</table>
<br>ಸಾರಿಗೆ/ಬೆಂಗಾವಲು ಭತ್ಯೆ ಫಲಾನುಭವಿಗಳು ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ.</td></tr>
<tr><td>ಉ)</td><td>ರಾಜ್ಯದಲ್ಲಿ ಶಾಲೆಗೆ ಹೆಚ್ಚು ಮಕ್ಕಳನ್ನು ಸೆಳೆಯಲು ಸರ್ಕಾರದಿಂದ ಯಾವ ಕ್ರಮ ಕೈಗೊಂಡಿದೇ ಮತ್ತು ಅದರಿಂದ ಹೆಚ್ಚುವರಿಯಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)?</td><td><u>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶೈಕ್ಷಣಿಕ ಮುಖ್ಯವಾಹಿನಿಗೆ ತರಲು ಕೈಗೊಳ್ಳುತ್ತಿರುವ ವಿವಿಧ ಕಾರ್ಯತಂತ್ರಗಳು ಈ ಕೆಳಕಂಡಂತಿವೆ :</u><br><br>• ಪ್ರತಿ ವರ್ಷ ಶಿಕ್ಷಣ ಮಂತ್ರಾಲಯದಿಂದ PAB ಯಲ್ಲಿ ಅನುಮೋದಿತ ಕಾರ್ಯಕ್ರಮದ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು 3/6/9/12 ತಿಂಗಳ ವಸತಿ ರಹಿತ ಹಾಗೂ ವಸತಿ ಸಹಿತ ವಿಶೇಷ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.</td></tr>
</table>

| | | |
|---|---|---|
| | | • ಸಮೀಕ್ಷೆಯಲ್ಲಿ ಗುರುತಿಸಲಾದ ಬೀದಿ ಮಕ್ಕಳು, ನಗರ ವಂಚಿತ ಚಿಂದಿ ಆಯುವವರು, ಬಾಲ ಕಾರ್ಮಿಕರು, ಅನಾರೋಗ್ಯ ಪೀಡಿತ ಮಕ್ಕಳು, ವಿಶೇಷ ಅಗತ್ಯವಿರುವ ಮಕ್ಕಳು, ಅನಾಥರು, ಇತರ ರಾಜ್ಯಗಳು ಅಥವಾ ಜಿಲ್ಲೆಗಳಿಂದ ವಲಸೆ ಬಂದ ಮಕ್ಕಳಿಗೆ ಅಗತ್ಯ ತರಬೇತಿ ನೀಡಿ ಕಲಿಕೆಯ ಮಟ್ಟವನ್ನು ಆಧರಿಸಿ, ನೇತಾಜಿ ಅನಿವಾಸೀಯ ವಿದ್ಯಾಲಯ, ಚಿಣ್ಣರ ತಂಗುಧಾಮ(Transit Homes) ಹಾಗೂ ಕೆಜಿಬಿವಿ ಶಾಲೆಗಳು ಕೆಕೆಜಿಬಿವಿ(Hostels) ವಸತಿ ಶಾಲೆಗಳಲ್ಲಿ ದಾಖಲಿಸಲಾಗುತ್ತಿದೆ.<br><br>• ಶಾಲಾ ಲಭ್ಯತೆಯಿಲ್ಲದ ಪ್ರದೇಶಗಳಾದ ಅರಣ್ಯ ಪ್ರದೇಶ, ಗುಡ್ಡಗಾಡು, ನದಿತೀರಗಳು, ಕಾಲುವೆ, ರಾಷ್ಟ್ರೀಯ/ರಾಜ್ಯ ಹೆದ್ದಾರಿ ಹಾದುಹೋಗಿರುವ ಪ್ರದೇಶಗಳಿಂದ ಸಮೀಪದ ಶಾಲೆಗಳಿಗೆ ವ್ಯಾಸಂಗಕ್ಕಾಗಿ ತೆರಳುವ ಮಕ್ಕಳಿಗೆ ಸಾರಿಗೆ ಮತ್ತು ಬೆಂಗಾವಲು ಅನುದಾನವನ್ನು ನೀಡಲಾಗುತ್ತಿದೆ.<br><br>• ವಿಶೇಷ ಅಗತ್ಯವಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ಶಿಕ್ಷಕರ ಬೆಂಬಲವನ್ನು ಒದಗಿಸಲಾಗುತ್ತಿದೆ. ಅಂಗವೈಕಲ್ಯದ ಆಧಾರದ ಮೇಲೆ ವಿದ್ಯಾರ್ಥಿ ನಿರ್ದಿಷ್ಟ ಭತ್ಯೆಗಳಾದ ಸಾರಿಗೆ ಭತ್ಯೆ ಬೆಂಗಾವಲು ಭತ್ಯೆ ಓದುಗರ ಭತ್ಯೆ ಮತ್ತು ಹೆಣ್ಣು ಮಕ್ಕಳ ಭತ್ಯೆಯನ್ನು ಒದಗಿಸಲಾಗುತ್ತಿದೆ. ತೀವ್ರ ಅಂಗವೈಕಲ್ಯ ಅಥವಾ ತೀವ್ರ ಲೊಕೋ ಮೋಟಾರ್ ಅಂಗವೈಕಲ್ಯದ ಸಂದರ್ಭದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಅಗತ್ಯ ಕೌಶಲ್ಯ ತರಬೇತಿಯೊಂದಿಗೆ ಗೃಹ ಆಧಾರಿತ ಶಿಕ್ಷಣವನ್ನು ಒದಗಿಸಲಾಗುತ್ತಿದೆ.<br><br>• ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಪ್ರವೇಶ ಅವಕಾಶವಿಲ್ಲದ ಪ್ರದೇಶಗಳಲ್ಲಿ ಹೊಸ ಸರ್ಕಾರಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತದೆ ಜೊತೆಗೆ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆ ಮತ್ತು ಪ್ರೌಢಶಾಲೆ ಶಾಲೆಗಳನ್ನು ಪದವಿ ಪೂರ್ವ ಕಾಲೇಜು (XI & XII ತರಗತಿ) ಗೆ ಉನ್ನತೀಕರಿಸಲಾಗುತ್ತಿದೆ. ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಇದು ಒಂದು ನಿರ್ಣಾಯಕ ಹೆಜ್ಜೆಯಾಗಿದೆ.<br><br>• ಶಿಕ್ಷಣ ಇಲಾಖೆಯು EDCS, RDPR, BBMP ಮತ್ತು UDD ಇಲಾಖೆಗಳ ಸಹಯೋಗದೊಂದಿಗೆ ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳ ಮನೆ-ಮನೆ ಸಮೀಕ್ಷೆಯನ್ನು ನಡೆಸಲು ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ. RTE 2009 ನಿಯಮ 6ರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಪರಿಣಾಮಕಾರಿಯಾಗಿ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸಲು ಈ ಮೊಬೈಲ್ ಅಪ್ಲಿಕೇಶನ್ ಅನ್ನು ವಿನ್ಯಾಸಗೊಳಿಸಲಾಗಿದೆ.<br><br>• ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು "ವಲಸೆ ಮಕ್ಕಳು ಮತ್ತು ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣ ಹಕ್ಕು ನೀತಿ - 2019" ಅನುಷ್ಠಾನದ ಕುರಿತು ನೀತಿಯನ್ನು ರೂಪಿಸಿದೆ. ಸದರಿ ನೀತಿಯನ್ನು ರಚಿಸಿರುವ ದೇಶದಲ್ಲಿ ಕರ್ನಾಟಕವು ಮೊದಲನೆಯ ರಾಜ್ಯವಾಗಿದೆ. ಇದರಂತೆ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ನೀತಿಯನ್ನು ಪರಿಣಾಮಕಾರಿಯಾಗಿ ಅಳವಡಿಕೊಳ್ಳಲಾಗುತ್ತಿದೆ.<br><br>• ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಶಾಲೆ ಬಿಡುವ ಅವಧಿಯನ್ನು 60 ದಿನಗಳ ಬದಲಿಗೆ 7 ದಿನಗಳು ಎಂದು ಪರಿಗಣಿಸಲಾಗುತ್ತದೆ. ಪ್ರತಿ ಶೈಕ್ಷಣಿಕ ಬ್ಲಾಕ್ ನಲ್ಲಿ 4 ರಿಂದ 5 ಹಾಜರಾತಿ ಅಧಿಕಾರಿಗಳನ್ನು (ಶಿಕ್ಷಣ ಸಂಯೋಜಕರು) |

| | | |
|---|---|---|
| | | ನೇಮಕಮಾಡಲಾಗಿದೆ: ಕರ್ನಾಟಕ ರಾಜ್ಯದಲ್ಲಿ 204 ಶೈಕ್ಷಣಿಕ ಬ್ಲಾಕ್‌ಗಳಿವೆ. ಪ್ರತಿಯೊಬ್ಬ ಹಾಜರಾತಿ ಅಧಿಕಾರಿಯು ಬ್ಲಾಕ್‌ನ ಅಡಿಯಲ್ಲಿರುವ ಶಾಲೆಗಳಿಗೆ ಜವಾಬ್ದಾರರಾಗಿರುತ್ತಾರೆ, ಶಾಲೆಯಲ್ಲಿ ಮಕ್ಕಳ ಹಾಜರಾತಿ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಾರೆ. 7 ದಿನಗಳಿಗಿಂತ ಹೆಚ್ಚು ಕಾಲ ಶಾಲೆಗೆ ಗೈರುಹಾಜರಾದ ಮಗುವನ್ನು ಇಲಾಖೆಯು ಶಾಲೆಯಿಂದ ಹೊರಗುಳಿದ ಮಕ್ಕಳೆಂದು ಪರಿಗಣಿಸುತ್ತದೆ. ಮೇಲ್ವಿಚಾರಣಾ ಪ್ರಾಧಿಕಾರವು 7ನೇ ದಿನದ ಗೈರುಹಾಜರಾದ ಮಗುವಿನ ಮೇಲೆ ನಿಗಾ ಇಡುತ್ತದೆ ಮತ್ತು RTE 2 2009 6A, 6B, 6C ಮತ್ತು 6D ಪ್ರಕಾರ ಕೈಗೊಳ್ಳಲಾಗುತ್ತಿದೆ.<br>• 2024-25ನೇ ಸಾಲಿಗೆ, RTE ನಿಯಮ 6A, 6B, 6C ಮತ್ತು 6D ಪ್ರಕಾರ ರಾಜ್ಯದ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು, ಹಾಜರಾತಿ ಅಧಿಕಾರಿಗಳು (ಶಿಕ್ಷಣ ಸಂಯೋಜಕರು), ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ orientation ಕಾರ್ಯಕ್ರಮವನ್ನು ಒದಗಿಸಲಾಗಿದೆ.<br>• ಮಕ್ಕಳ ಹಾಜರಾತಿಯನ್ನು ಉತ್ತೇಜಿಸಲು, ಇಲಾಖೆಯು ವಿದ್ಯಾ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ, ಹಾಲು, ಮೊಟ್ಟೆ, ಬಾಳೆಹಣ್ಣು ಹಾಗೂ ಪಠ್ಯ ಪುಸ್ತಕಗಳು, Work Book, ಟಿಎಲ್‌ಎಂ, ಶೂ-ಸಾಕ್ಸ್, ಎರಡು ಸೆಟ್ ಸಮವಸ್ತ್ರಗಳು ಮತ್ತು Vitamin ಮಾತ್ರೆಗಳು ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ.<br>• ಪ್ರತಿಭಾ ಕಾರಂಜಿ ಕಾರ್ಯಕ್ರಮದಡಿಯಲ್ಲಿ, ಶಾಲೆಗಳಲ್ಲಿರುವ ಎಲ್ಲಾ ಮಕ್ಕಳು ವಿವಿಧ ಹಂತಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ.<br>• 2024-25 ರಲ್ಲಿ 16 ರಿಂದ 19 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ದಾಖಲಾದ ಮಕ್ಕಳಿಗೆ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಯ (NIOS) ಮೂಲಕ ಪರೀಕ್ಷೆಗೆ ನೋಂದಣಿ ಮಾಡಲು ಬ್ಲಾಕ್ ಹಂತದಲ್ಲಿ KPS ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳಲ್ಲಿ 220 ಅಧ್ಯಯನ ಕೇಂದ್ರಗಳನ್ನು ಗುರುತಿಸಲಾಗಿದೆ.<br><br>ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸುವ, ದಾಖಲಿಸುವ ಮತ್ತು ಶೈಕ್ಷಣಿಕ ಮುಖ್ಯವಾಹಿನಿಗೆ ತರುವ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. |

**ಸಂಖ್ಯೆ: ಇಪಿ 201 ಪಿಟಿಐ 2025**

(ಎಸ್.ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು